# ಮಾನವ ಸಂಬಂಧ ಬೆಸೆಯುವ ರಾಜಿ ಸಂಧಾನ

## ಲೋಕ್ ಅದಾಲತ್‌ನಲ್ಲಿ ನ್ಯಾ. ಅಣ್ಣಯ್ಯನವರ ಅಭಿಮತ । ಜಿಲ್ಲಾದ್ಯಂತ 1,53,727 ಪ್ರಕರಣಗಳು ಇತ್ಯರ್ಥ

**ಸಂ.ಕ.ಸಮಾಚಾರ, ರಾಮನಗರ**

ಲೋಕ ಅದಾಲತ್‌ನಲ್ಲಿ ನಡೆಯುವ ರಾಜೀ ಸಂಧಾನದಿಂದ ಮಾನವ ಸಂಬಂಧಗಳು ಬೆಸೆಯುತ್ತವೆ. ಸಮಯ, ಹಣ ಹಾಗೂ ಅಲೆದಾಟ ದಿಂದ ಕಕ್ಷಿದಾರರಿಗೆ ಮುಕ್ತಿ ದೊರೆಯುತ್ತದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ನ್ಯಾ. ಎಂ.ಎಚ್. ಅಣ್ಣಯ್ಯನವರ ತಿಳಿಸಿದರು.

ಶನಿವಾರ ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಭಾಗವಹಿಸಿ, ಬಳಿಕ ಸುದ್ದಿಗಾರರ ಜೊತೆ ಅವರು ಮಾತನಾಡಿದರು. ಜಿಲ್ಲಾದ್ಯಂತ 1,53,727 ಪ್ರಕರಣಗಳು ಇತ್ಯರ್ಥಗೊಂಡಿವೆ. ಕಕ್ಷಿದಾರರು ತಮ್ಮ ವಿವಾದಗಳನ್ನು ಸೌಹಾರ್ದಯುತವಾಗಿ ಮತ್ತು ತ್ವರಿತವಾಗಿ ಪರಿಹರಿಸಿಕೊಳ್ಳಲು ಲೋಕ ಅದಾಲತ್ ವೇದಿಕೆಯಾಗಿದೆ ಎಂದರು.

ನ್ಯಾಯಾಲಯದಲ್ಲಿರುವ ಒಟ್ಟು 60, 130 ವಿಚಾರಣೆಗೆ ಬಾಕಿ ಇರುವ ಪ್ರಕರಣಗಳಲ್ಲಿ 9,647 ಪ್ರಕರಣ, 1.50.856 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರಾಜಿ ಸಂಧಾನಕ್ಕಾಗಿ ತೆಗೆದುಕೊಂಡಿದ್ದು, ಅದರಲ್ಲಿ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುವ 3084 ಪ್ರಕರಣಗಳನ್ನು ಹಾಗೂ 150643 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಒಟ್ಟಾರೆ 153727 ಪ್ರಕರಣಗಳನ್ನು ರಾಜಿ ಸಂದಾನದ ಮೂಲಕ ಇತ್ಯರ್ಥಪಡಿಸಲಾಗಿದೆ ಎಂದು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸವಿತ ಪಿ.ಆರ್. ವಕೀಲರಾದ ತಿಮ್ಮೇಗೌಡ, ಹನುಮಂತಯ್ಯ, ದೇವರಾಜು, ಹರೀಶ್ ಸೇರಿದಂತೆ ಹಲವು ವಕೀಲರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

### ಇತ್ಯರ್ಥವಾದ ಪ್ರಕರಣ

ಇತ್ಯರ್ಥಗೊಂಡ ಪ್ರಕರಣಗಳಲ್ಲಿ 84 ರಾಜಿಯಾ ಗಬಲ್ಲ ಕ್ರಿಮಿನಲ್ ಕಂಪೌಂಡೆಬಲ್ ಪ್ರಕರಣ, 163 ನೆಗೋಷಬಲ್ ಇನ್ಸ್ಟ್ರುಮೆಂಟ್ ಕಾಯಿದೆ ಪ್ರಕರಣ, 17 ಸಾಲ ವಸೂಲಾತಿ , 59 ಮೋಟಾ ರು ವಾಹನ ಅಪಘಾತ , 48 ಕಾರ್ಮಿಕ ವಿವಾದ 8 ಗಣಿ ಮತ್ತು ಭೂ ವಿಜ್ಞಾನ , 4 ಉದ್ಯೋಗಿಗಳ ಪರಿಹಾರ , 4 ವೈವಾಹಿ, 3 ಭೂಸ್ವಾಧೀನ ,74 ಆಸ್ತಿ , 25 ಎಂವಿಸಿ ಮರಣದಂಡನೆ ಇತರೆ ಪ್ರಕರಣ ಸೇರಿ ಒಟ್ಟು 1.53,727 ಪ್ರಕರಣ ಲೋಕ ಅದಾಲತ್‌ನಲ್ಲಿ ಇತ್ಯರ್ಥಪಡಿಸಲಾಯಿತು.

# ಓಲೈಕೆಗಾಗಿ ಗೋಹತ್ಯೆ ನಿಷೇಧ ಕಾಯ್ದೆಗೆ ತಿದ್ದುಪಡಿ: ವಿರೋಧ

**ಸಂ.ಕ.ಸಮಾಚಾರ ದೇವನಹಳ್ಳಿ**

ಹಿಂದೂಗಳ ಭಾವನೆಗೆ ಧಕ್ಕೆ ತಂದು, ಮತೀಯ

ಓಲೈಕೆಗಾಗಿ ರಾಜ್ಯ ಸರ್ಕಾರ ಗೋಹತ್ಯೆ ನಿಷೇಧ ಕಾಯ್ದೆಗೆ ತಿದ್ದುಪಡಿ ತರುವ ಹುನ್ನಾರ ನಡೆಸಿರುವುದು ಸರಿಯಲ್ಲ, ಕಾಯ್ದೆಯನ್ನು ಯಥಾಸ್ಥಿತಿ ಉಳಿಸಬೇಕೊಂಡು ಮತ್ತಷ್ಟು ಕಠಿಣವಾಗಿ ಅನುಷ್ಠಾನ ಗೊಳಿಸಬೇಕು ಎಂದು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಎಚ್. ಎಮ್.ರವಿಕುಮಾರ್ ಒತ್ತಾಯಿಸಿದರು. ತಾಲೂಕಿನ ವಾಚರಹಳ್ಳಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಗೋವುಗಳನ್ನು ಅತ್ಯಂತ ಹಿಂಸಾತ್ಮಕವಾಗಿ, ಒಂದೇ ವಾಹನದಲ್ಲಿ ಕ್ರೂರವಾಗಿ ಸಾಗಾಟ ಮಾಡುತ್ತಿರುವ ಪ್ರಕರಣಗಳು ಕಂಡುಬರುತ್ತವೆ. ಗೋಹತ್ಯೆ ನಿಷೇಧ ಕಾಯ್ದೆ ಜಾರಿಯಾದಾಗಿನಿಂದ ಆ ಕ್ರೂರತೆ ನಿಯಂತ್ರಣದಲ್ಲಿದಿತ್ತು.

ಈ ಕಾಯ್ದೆಯನ್ನು ಮತ್ತಷ್ಟು ಬಿಗಿ ಮಾಡಿ ಕಟ್ಟುನಿಟ್ಟಾಗಿ ಜಾರಿ ಮಾಡಬೇಕಾದ ಸರ್ಕಾರ ಇನ್ನಷ್ಟು ಸಡಿಲಗೊಳಿಸಿ ಗೋ ಕಳ್ಳರಿಗೆ ಅನುಕೂಲ ಮಾಡುವ ಪ್ರಯತ್ನ ಮಾಡಲು ಹಾಗೂ ಗೋವುಗಳನ್ನು ಸುಲಭವಾಗಿ ಸಾಗಾಟ ಮಾಡಲು ರಕ್ಷಣೆ ಕೊಡುವಂತಹ ಹುನ್ನಾರದ ಪ್ರಯತ್ನ ಮಾಡಲು ಹೊರಟಿದೆ ಎಂದು ಆರೋಪಿಸಿದರು.

# ಗ್ರಾಮೀಣ ಭಾಗದ ಸಮರ್ಪಕ ರಸ್ತೆ ದೇಶದ ಪ್ರಗತಿಯ ಸಂಕೇತ

## 3.60 ಕೋಟಿ ವೆಚ್ಚದ ರಸ್ತೆ ಕಾಮಗಾರಿಗೆ ಚಾಲನೆ



**ಸಂ.ಕ.ಸಮಾಚಾರ ಹೊಸಕೋಟೆ**

ಗ್ರಾಮೀಣ ಭಾಗದ ಗುಣಮಟ್ಟದ ರಸ್ತೆಗಳು ದೇಶದ ಪ್ರಗತಿಯ ಸಂಕೇತವಾಗಿವೆ ಎಂದು ಶಾಸಕರಾದ ಶರತ್ ಬಚ್ಚೇಗೌಡ ತಿಳಿಸಿದರು.

ತಾಲೂಕಿನ ದೇವಾಲಾಪುರದಿಂದ ದೇವನಗೊಂದಿವರೆಗೆ ಶಾಸಕರ ಅನುದಾನದಲ್ಲಿ 1.9 ಕಿ.ಮೀ ಉದ್ದದ ರಸ್ತೆ 60 ಲಕ್ಷ ರೂ.ಮೊತ್ತದ ಡಾಂಬರೀಕರಣ ಮತ್ತು ಕೆ ಮಲ್ಲಸಂದ್ರದಿಂದ ಕಾಡುಗುಡಿಗೆ ಸಂಪರ್ಕ ಕಲ್ಪಿಸುವ ರಸ್ತೆ 3 ಕೋಟಿ ಮೊತ್ತದ ಕಾಂಕ್ರೀಟ್ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿ, ಈ ರಸ್ತೆಯ ಅಕ್ಕಪಕ್ಕಗಳಲ್ಲಿ ರೈತರ ಜಮೀನುಗಳಿದ್ದು ವಸತಿ ಬಡಾವಣೆ, ಶಾಲೆಗಳೂ ಕೂಡ ಇದ್ದು ಸಾಕಷ್ಟು ಸಮಸ್ಯೆಯಿದ್ದು ಅದನ್ನು ಅಭಿವೃದ್ಧಿ ಪಡಿಸಲು ಶಾಸಕರ ಅನುದಾನದಲ್ಲಿ ಮೂರು ಕೋಟಿ ರೂ. ಮೊತ್ತದಲ್ಲಿ ಅಭಿವೃದ್ಧಿ ಪಡಿಸಲು ಚಾಲನೆ ನೀಡಿದ್ದು, ಇದರಿಂದ ರಸ್ತೆಯ ಅಕ್ಕ ಪಕ್ಕದಲ್ಲಿನ ಭೂಮಿಗೂ ಬೆಲೆ ಹೆಚ್ಚಿ ರೈತರಿಗೆ ಅನುಕೂಲವಾಗುತ್ತದೆ ಎಂದರು.

ಈ ಸಂಧರ್ಭದಲ್ಲಿ, ಪಿಡಿಒ ಹರೀಶ್, ಗ್ರಾ.ಪಂ ಅಧ್ಯಕ್ಷ ಕಾಂತರಾಜ್, ಪ್ರಸಾದ್, ಬಮುಲ್ ನಿರ್ದೇಶಕ ಕೆ.ಎಂ.ಎಂ. ಮಂಜುನಾಥ್, ಭೋಧನ ಹೊಸಹಳ್ಳಿ ಪ್ರಕಾಶ್, ನಾಣಿ, ಕೃಷ್ಣಮೂರ್ತಿ, ಮುತ್ಕೂರು ಮುನಿರಾಜ್, ಗೋವಿಂದಪ್ಪ, ಸುನಿಲ್, ಬಾಬು, ಖರ್ಗೆ, ವಾಸು, ತಮ್ಮೇಗೌಡ ಇದ್ದರು.

### ಶೀಘ್ರ ಕಾಮಗಾರಿ ಪೂರ್ಣಗೊಳಿಸಿ

ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ಜೊತೆಗೆ, ಸ್ಥಳೀಯರಿಗೆ ಸಮಸ್ಯೆಯಾಗದ ರೀತಿಯಲ್ಲಿ ಶೀಘ್ರವಾಗಿ ಕಾಮಗಾರಿ ಪೂರ್ಣಗೊಳಿಸದಿದ್ದರೆ, ಬಿಲ್ ತಡೆಹಿಡಿಯುಂತೆ ಅಧಿಕಾರಿಗಳಿಗೆ ಸೂಚಿಸಿದರು. ದೇವನಗೊಂದಿ ಗ್ರಾಮದಲ್ಲಿ ಸಾಕಷ್ಟು ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಚರಂಡಿ, ಬೀದಿ ದೀಪ ಇವುಗಳ ಸಮಸ್ಯೆ ಇನ್ನೂ ಒಂದು ವಾರದೊಳಗೆ ಬಗೆಹರಿಸಬೇಕು ಎಂದು ಗ್ರಾ.ಪಂ ಅಭಿವೃದ್ಧಿ ಅಧಿಕಾರಿಗೆ ಶಾಸಕ ಶರತ್ ಬಚ್ಚೇಗೌಡ ಸೂಚಿಸಿದರು.

# ವೈಮನಸ್ಸು ಮರೆತು 9 ವರ್ಷದ ನಂತರ ಒಂದಾದ ದಂಪತಿ

## ಲೋಕ್ ಅದಾಲತ್ ಮೂಲಕ ಸುಖಾಂತ್ಯ

**ಸಂ.ಕ.ಸಮಾಚಾರ ಚನ್ನಪಟ್ಟಣ**

ತಾಲೂಕಿನ ಕೋಡಂಬಹಳ್ಳಿ ಗ್ರಾಮದ ದಂಪತಿ ಲೋಕೇಶ್ ಮತ್ತು ಪುಷ್ಪಲತಾ ಎಂಬವರು ಭಿನ್ನಾಭಿಪ್ರಾಯಗಳಿಂದಾಗಿ ಕಳೆದ 9 ವರ್ಷಗಳಿಂದ ನ್ಯಾಯಾಲಯದ ಮೆಟ್ಟಿಲೇರಿದ್ದು, ಅವರ ಪ್ರಕರಣವು ಶನಿವಾರ ನಡೆದ ಲೋಕ್ ಅದಾಲತ್ ಮೂಲಕ ಸುಖಾಂತ್ಯ ಕಂಡಿತು. ದಂಪತಿಗಳು ತಮ್ಮ ಎಲ್ಲಾ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಜೊತೆಯಾಗಿ ಸಂಸಾರವನ್ನು ನಡೆಸಲು ಸಮ್ಮತಿಸಿದ್ದು, ಇದರಿಂದ ನೂತನವಾಗಿ ಆರಂಭಗೊಂಡಂತಹ ಅಪರ ಹಿರಿಯ ಸಿವಿಲ್ ನ್ಯಾಯಾಲಯಕ್ಕೊಂದು ಹಿರಿಮೆಯನ್ನು ಮೂಡಿಸಿದೆ.

ಈ ಸಂದರ್ಭದಲ್ಲಿ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರಾದ ಗೌರವಾನ್ವಿತ ಸಂದೇಶ್ ಕೆ ರವರು ಹಾಜರಿದ್ದು ನವ ಜೋಡಿಗಳಿಗೆ ಶುಭ ಹಾರೈಸಿದರು.

ದಂಪತಿಗಳನ್ನು ಒಂದುಗೂಡಿಸಿದ ವಕೀಲರಾದ ಎಂ.ಎಸ್. ಬಸವರಾಜು ಮತ್ತು ಆರ್ ಧರ್ಮೇಂದ್ರ ಕುಮಾರ್, ಭೋಜೇಗೌಡ, ಧನಂಜಯ, ಪ್ರಸನ್ನ, ಸುನೀಲ್, ರವಿಶಂಕರ್, ಶಿವರಾಜು ಹಾಗೂ ಇನ್ನಿತರರು ಹಾಜರಿದ್ದರು.

# ನಾಳೆ ಸುವರ್ಣಸೌಧ ಚಲೋ

**ಸಂ.ಕ.ಸಮಾಚಾರ ಕನಕಪುರ**

ರಾಜ್ಯ ಸರ್ಕಾರ ಇತ್ತೀಚೆಗೆ ದಾಸ್ತವೇಜು ಪತ್ರ ಬರಹಗಾರರ್ನು ನಿರುದ್ಯೋಗಿಗಳನ್ನಾಗಿ ಮಾಡುತ್ತಿರುವ ಧೋರಣೆ ಖಂಡಿಸಿ, ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಡಿ.16 ರಂದು ಬೆಳಗಾವಿ ಸುವರ್ಣಸೌಧ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಪತ್ರ ಬರಹಗಾರರ ಅಸೋಸಿಯೇಷನ್ ಅಧ್ಯಕ್ಷ ಕೆ.ಎಸ್. ಮುರುಳಿಧರ್ ಹೇಳಿದರು.

ನಗರದ ಸಬ್‌ರಿಜಿಸ್ಟರ್ ಕಚೇರಿ ಎದುರು ಪ್ರತಿಭಟನೆ ನಡೆಸಿ ನೊಂದಣಾಧಿಕಾರಿ ಸುರೇಶ್ ರವರಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು, ಹಲವಾರು ವರ್ಷಗಳ ಇತಿಹಾಸವಿರುವ ಪತ್ರ ಬರಹಗಾರರ ವೃತ್ತಿಯನ್ನು ಹತ್ತಿಕ್ಕುವ ಹುನ್ನಾರ ರಾಜ್ಯ ಸರ್ಕಾರ ಮಾಡುತ್ತಿದ್ದೆ. ಈ ಹಿಂದೆ ಜಾರಿಗೆ ತಂದಿದ್ದ ಕಾವೇರಿ 2 ಎಂಬ ತಂತ್ರಾಂಶದಲ್ಲಿ ಸಿಟಿಜನ್ ಲಾಗಿನ್ ಮೂಲಕ ಸಾರ್ವಜನಿಕರು ಸಹ ತಮ್ಮ ಆಸ್ತಿಗೆ ಸಂಬಂಧಿಸಿದ ಪತ್ರಗಳನ್ನು ಅವರೇ ನೋಂದಣಿ ಮಾಡಲು ಅವಕಾಶ ನೀಡಲಾಗಿತ್ತು. ಆದರೆ ಈ ಅವಕಾಶವನ್ನು ಸಾರ್ವಜನಿಕರು ಬಳಸಿಕೊಂಡಿಲ್ಲ, ಬದಲಾಗಿ ಡಿ.ಟಿ.ಪಿ ಸೆಂಟರ್, ಸೈಬರ್ ಸೆಂಟರ್ ಮತ್ತು ಕಂಪ್ಯೂಟರ್ ಸೆಂಟರ್‌ನವರು ದುರುಪಯೋಗ ಮಾಡಿಕೊಂಡು ತಾವುಗಳು ಪತ್ರವನ್ನು ಮಾಡಿಕೊಡುತ್ತೇವೆ ಎಂದು ಹೇಳುತ್ತಿರುವುದು ಅವೈಜ್ಞಾನಿಕವಾಗಿದೆ ಎಂದರು.

ಬರಹಗಾರರ ಅಸೋಸಿಯೇಷನ್ ಉಪಾಧ್ಯಕ್ಷ ಟಿ.ಗೋಪಿ, ಕಾರ್ಯದರ್ಶಿ ಕಾಂತರಾಜು, ಗೌರವಾಧ್ಯಕ್ಷ ಕೆ.ಪಿ.ಮಹದೇವಪ್ರಕಾಶ್, ವಿ.ನರಸಿಂಹಮೂರ್ತಿ, ಸತೀಶ್, ಪ್ರೇಮೇಶ್, ಕೆ.ಎಂ.ಪ್ರಕಾಶ್, ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಕಾಡಾನೆ ದಾಳಿಗೆ ಅನ್ನದಾತ ಸಾವು

**ಸಂ.ಕ.ಸಮಾಚಾರ ಹಾರೋಹಳ್ಳಿ**

ಜಮೀನಿಗೆ ನೀರು ಹಾಯಿಸಲು ಹೋಗಿದ್ದ ರೈತರೊಬ್ಬರು ಕಾಡಾನೆ ದಾಳಿಯಿಂದ ಮೃತಪಟ್ಟಿರುವ ಘಟನೆ ಹಾರೋಹಳ್ಳಿ ತಾಲ್ಲೂಕಿನ ಮರಳವಾಡಿ ಹೋಬಳಿಯಲ್ಲಿ ಭಾನುವಾರ ಬೆಳಿಗ್ಗೆ ನಡೆದಿದೆ.

ದುನ್ನಸಂದ್ರ ಗ್ರಾಮದ ಪುಟ್ಟಮಾದೇಗೌಡ(50) ಮೃತ ರೈತ, ಕನಕಪುರ–ಮರುಳವಾಡಿ ರಸ್ತೆ, ದುನ್ನಸಂದ್ರ ಗ್ರಾಮದ ಕೆಇಬಿ ಬಳಿಯ ಇಟ್ಟಿಗೆ ಕಾರ್ಖಾನೆ ಸಮೀಪದಲ್ಲಿರುವ ತಮ್ಮ ಜಮೀನಿಗೆ ಪುಟ್ಟಮಾದೇಗೌಡರು ತಡರಾತ್ರಿ ನೀರು ಹಾಯಿಸಲು ಹೋಗಿದ್ದಾರೆ. ಭಾನುವಾರ ಬೆಳಗಿನ ಜಾವ 5.30ರ ಸುಮಾರಿಗೆ ತಮ್ಮ ಜಮೀನಿನ ಮಾವಿನ ತೋಪಿನ ಬಳಿ ಬರುತ್ತಿರುವಾಗ ಏಕಾಏಕಿ ಆನೆ ದಾಳಿ ಮಾಡಿ ತುಳಿದು ಸಾಯಿಸಿದೆ. ಬೆಳಗ್ಗೆ 7 ಗಂಟೆಯಾದರೂ ಪುಟ್ಟ ಮಾದೇಗೌಡರು ಮನೆಗೆ ವಾಪಸ್ಸಾಗದಿದ್ದಾಗ ಕುಟುಂಬಸ್ಥರು ಜಮೀನು ಬಳಿ ಹೋಗಿ ನೋಡಿದಾಗ ಆನೆ ದಾಳಿಯಿಂದ ಮೃತಪಟ್ಟಿರುವುದು ಕಂಡುಬಂದಿದೆ.

ವಿಷಯ ತಿಳಿದು ವಲಯ ಅರಣ್ಯಾಧಿಕಾರಿ ರವಿ ಅವರು ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಿದ್ದಾರೆ.

### ಕಾಡಾನೆ ಸೆರೆಗೆ ಆಗ್ರಹ

ತಾಲ್ಲೂಕಿನಲ್ಲಿ ನಿರಂತರವಾಗಿ ಕಾಡಾನೆಗಳ ದಾಳಿ ಮುಂದುವರೆದಿದ್ದು, ಸಾವುನೋವುಗಳು ಸಂಭವಿಸುತ್ತಲೇ ಇವೆ. ಅರಣ್ಯ ಇಲಾಖೆ ಆನೆಗಳನ್ನು ನಿಯಂತ್ರಿಸುವಲ್ಲಿ ವಿಫಲವಾಗಿದೆ ಎಂದು ಸಮಾಜ ಸೇವಕ ಅನಿಲ್‌ಕುಮಾರ್ ಆರೋಪಿಸಿದ್ದಾರೆ. ಆನೆಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳದೆ ಇದ್ದರೆ ಈ ಸಂಬಂಧ ನ್ಯಾಯಾಲಯದ ಮೊರೆ ಹೋಗಬೇಕಾಗುತ್ತದೆ. ಜೊತೆಗೆ ಪ್ರಧಾನಿಯವರಿಗೂ ಕೂಡ ಪತ್ರ ಬರೆಯಲಾಗಿದೆ ಎಂದು ತಿಳಿಸಿದ್ದಾರೆ.


**ಸಾಲ ವಸೂಲಾತಿ ನ್ಯಾಯಮಂಡಳಿ-II ರ ಸಮಕ್ಷಮ, ಬೆಂಗಳೂರು**
ಹೊಸ ಆವರಣ 4ನೇ ಮಹಡಿ, ಟೆಲಿಫೋನ್ ಹೌಸ್ ಕಟ್ಟಡರಾಜ್ ಭವನ್ ರಸ್ತೆ ಬೆಂಗಳೂರು – 560 001
ಒ.ಎ. ನಂ. 1403/2025
ನಡುವೆ : ಕೆನರಾ ಬ್ಯಾಂಕ್ ...ಅರ್ಜಿದಾರರು
ವಿರುದ್ಧ
ಶ್ರೀಮತಿ ವರಲಕ್ಷ್ಮಿ @ ಮುನಿಲಕ್ಷ್ಮಮ್ಮ ...ಪ್ರತಿವಾದಿಗಳು
ಸಾಲ ವಸೂಲಾತಿ ನ್ಯಾಯಮಂಡಳಿ (ವಿಧಾನ) ನಿಯಮಾವಳಿ 1993ರ ನಿಯಮ 23(VIII)ರಡಿ ಪತ್ರಿಕಾ ಪ್ರಕಟಣೆಯ ಮೂಲಕ ಪ್ರತಿವಾದಿಗಳಿಗೆ ನೀಡಲಾದ ಸಮನ್ಸ್/ನೋಟೀಸು
ಇವರಿಗೆ: ಶ್ರೀಮತಿ ವರಲಕ್ಷ್ಮಿ @ ಮುನಿಲಕ್ಷ್ಮಮ್ಮ W/o. ಲೇಟ್ ದೊಡ್ಡಮೈಲಾರಪ್ಪ, ಹುಸ್ಕೂರು ಗ್ರಾಮ, ದೊಡ್ಡಬೆಳವಂಗಲ ಹೋಬಳಿ, ದೊಡ್ಡಬಳ್ಳಾಪುರ ತಾಲೂಕು, ಬೆಂಗಳೂರು ಗ್ರಾಮಾಂತರ – 561 203.
ಆದಾಗಿ, ಅರ್ಜಿದಾರರು ಪ್ರತಿವಾದಿಗಳ ವಿರುದ್ಧ ಸಾಲ ವಸೂಲಾತಿ ಮತ್ತು ಬ್ಯಾಂಕರಪ್ಟ್ಸಿ ಕಾಯಿದೆ 1993 ಇದಕ್ಕೆ ಅನ್ವಯವಾಗುವಂತಹ ಕಲಂ 19(1)ರ ಅಡಿಯಲ್ಲಿ ಅರ್ಜಿಯನ್ನು/ ವಾದಕಾಲೀನ ಅರ್ಜಿಯನ್ನು ಸಲ್ಲಿಸಿ ರೂ.41,01,908.93 (ರೂಪಾಯಿ ನಲವತ್ತೊಂದು ಲಕ್ಷ ಒಂದು ಸಾವಿರದ ಒಂಬೈನೂರ ಎಂಟು ಮತ್ತು ಪೈಸೆ ತೊಂಬತ್ತ ಮೂರು ಮಾತ್ರ) ಜೊತೆಗೆ ಹಾಲಿ ಮತ್ತು ಮುಂದಿನ ಬಡ್ಡಿ, ವೆಚ್ಚ ಮತ್ತು ಇತರೆ ಪರಿಹಾರ ದೊಂದಿಗೆ ವಸೂಲಾತಿಗಾಗಿ ದಾಖಲು ಮಾಡಿರುತ್ತಾರೆ. ಮೇಲ್ಕಂಡ ಪ್ರತಿವಾದಿಗಳಿಗೆ ಈ ಮೂಲಕ ನಿರ್ದೇಶಿಸುವುದೇನೆಂದರೆ ಈ ಸಮನ್ಸ್‌ನ ಪ್ರಕಟಣೆಯ ದಿನಾಂಕದಿಂದ 30 ದಿನಗಳ ಒಳಗೆ ಅಥವಾ ದಿ.28.01.2026 ರಂದು ಬೆಳಿಗ್ಗೆ 10.30 ಘಂಟೆಗೆ ಖುದ್ದಾಗಿ ಅಥವಾ ವಕೀಲರ ಮೂಲಕ ವಾಗಲೀ ಹಾಜರಾಗಿ ಯಾಕಾಗಿ ಮೇಲೆ ಕೋರಿದ ಪರಿಹಾರ ಮೊತ್ತವನ್ನು ಮಂಜೂರು ಮಾಡಬಾರದು ಎಂಬುದಕ್ಕೆ ಸಮಜಾಯಿಷಿಯನ್ನು ತಿಳಿಸಕ್ಕದ್ದು. ತಪ್ಪಿದ್ದಲ್ಲಿ ಸದರಿ ದಾವೆಯನ್ನು ನಿಮ್ಮ ಅನುಪಸ್ಥಿತಿಯಲ್ಲಿ ತೀರ್ಮಾನಿಸಲಾಗುವುದು.
ನ್ಯಾಯಮಂಡಳಿಯ ಮೊಹರಿನೊಂದಿಗೆ ನನ್ನಿಂದ ದಿನಾಂಕ 21.11.2025ರಂದು ನೀಡಲ್ಪಟ್ಟಿದೆ.
ಸಹಿ/- ಸಮನ್ಸ್ ನೀಡಲು ಅಧಿಕಾರ ಹೊಂದಿರುವ ಅಧಿಕಾರಿಯವರ ಸಹಿ
ಸಾಲ ವಸೂಲಾತಿ ನ್ಯಾಯಾಧಿಕರಣ- 2, ಬೆಂಗಳೂರು

**ಸಾಲ ವಸೂಲಾತಿ ನ್ಯಾಯಮಂಡಳಿ-1**
4ನೇ ಮಹಡಿ, ಬಿಎಸ್‌ಎನ್‌ಎಲ್ ಕಟ್ಟಡ, ಟೆಲಿಫೋನ್ ಹೌಸ್, ರಾಜ್ ಭವನ್ ರಸ್ತೆ, ಬೆಂಗಳೂರು–560 001
ಒ. ಎ. ನಂ. 1314/2024
ನಡುವೆ : ಬ್ಯಾಂಕ್ ಆಫ್ ಇಂಡಿಯ , ಜ್ಞಾನಜ್ಯೋತಿ ನಗರ ಶಾಖೆ, ನಂ. 32/33, ಗುರುಕೃಪಾ ಉಲ್ಲಾಳ ಮುಖ್ಯ ರಸ್ತೆ, ಮುನೇಶ್ವರ ನಗರ, ಬೆಂಗಳೂರು 560 056. ... ಅರ್ಜಿದಾರರು
ಮತ್ತು
ಶ್ರೀ ಮುಹಮ್ಮದ್ ರಹೀಸ್ ಮತ್ತು ಇತರರು ...ಪ್ರತಿವಾದಿಗಳು
ದಿ-3. ಶ್ರೀ ಚೇತನ್, ವಯಸ್ಕರು, ಬಿನ್ ಶ್ರೀ ಗೋವಿಂದರಾಜು, ವಾಸ: ನಂ. 31, 1ನೇ ಅಡ್ಡರಸ್ತೆ, 3ನೇ ಮುಖ್ಯ ರಸ್ತೆ, ಸಾಯಿ ನಿಸರ್ಗ ಲೇಔಟ್ , ಚನ್ನಸಂದ್ರ, ಬೆಂಗಳೂರು– 560 098.
ಸಾಲ ವಸೂಲಾತಿ ನ್ಯಾಯಮಂಡಳಿ (ವಿಧಾನ) ನಿಯಮಾವಳಿ 1993ರ ನಿಯಮ 23(8)ರಡಿಯಲ್ಲಿ, ಪ್ರತಿವಾದಿ ನಂ. 3 ಇವರಿಗೆ ಪತ್ರಿಕಾ ಪ್ರಕಟಣೆಯ ಮೂಲಕ ನೀಡಲಾದ ಸಮನ್ಸ್
ಆದಾಗಿ ಅರ್ಜಿದಾರರು ನಿಮ್ಮವಿರುದ್ಧ ಸಾಲ ವಸೂಲಾತಿ ಮತ್ತು ದಿವಾಳಿತನ ಕಾಯಿದೆ 1993ರ ಅನ್ವಯ ಸಾಲ ವಸೂಲಾತಿ ಕಲಂ 19ರ ಅಡಿ ಅರ್ಜಿಯನ್ನು ಸಲ್ಲಿಸಿ ರೂ.24,45,990/- (ರೂಪಾಯಿ ಇಪ್ಪತ್ತನಾಲ್ಕು ಲಕ್ಷ ನಲವತ್ತೈದು ಸಾವಿರದ ಒಂಬೈನೂರ ತೊಂಬತ್ತು ಮಾತ್ರ) ಜೊತೆಗೆ ಮುಂದಿನ ಬಡ್ಡಿ ಇತರೆ ಪರಿಹಾರ ದೊಂದಿಗೆ ವಸೂಲಾತಿಗಾಗಿ ದಾಖಲು ಮಾಡಿರುತ್ತಾರೆ. ಆದ್ದರಿಂದ ಮೇಲ್ಕಂಡ ಪ್ರತಿವಾದಿಗಳಿಗೆ ಈ ಮೂಲಕ ನಿರ್ದೇಶಿಸುವುದೇನೆಂದರೆ ಖುದ್ದಾಗಿ / ವಕೀಲರ ಮೂಲಕವಾಗಲೀ ಅಥವಾ ಅಧಿಕೃತ ಏಜೆಂಟರ ಮೂಲಕವಾಗಲೀ ಈ ಪ್ರಕಟಣೆಯ ದಿನಾಂಕ ದಿಂದ 30 ದಿನಗಳ ಒಳಗೆ ಅಥವಾ ದಿ. 21.01.2026 ರಂದು ಬೆಳಿಗ್ಗೆ 10.30 ಘಂಟೆಗೆ ಹಾಜರಾಗಿ ಯಾಕಾಗಿ ಮೇಲೆ ಕೋರಿದ ಪರಿಹಾರ ಮೊತ್ತವನ್ನು ಮಂಜೂರು ಮಾಡಬಾರದು ಎಂಬುದಕ್ಕೆ ಸಮಜಾಯಿಷಿಯನ್ನು ತಿಳಿಸಕ್ಕದ್ದು. ತಪ್ಪಿದ್ದಲ್ಲಿ ಸದರಿ ದಾವೆಯನ್ನು ನಿಮ್ಮ ಅನುಪಸ್ಥಿತಿಯಲ್ಲಿ ಆಲಿಸಿ ತೀರ್ಮಾನಿಸ ಲಾ